**ಸಾಕ್ಷಿಯನ್ನು ದಿಃ 25.10.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಸಂಸ್ಥೆಯವರು ನೀಡಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ನಿಆರ್ . 10 ಎಂದು, ವಿಮಾ ಪಾಲಿಸಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ಹಾಜರುಪಡಿಸಿದ್ದು, ನಿಆರ್ . 11 ಎಂದು, ಎಂ.ಎಲ್.ಸಿ ಎಕ್ಸಟ್ರಾಕ್ಟ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 12 ಎಂದು, ಅಂತಿಮ ದೋಷರೋಪಣಾ ಪಟ್ಟಿಯ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 13 ಎಂದು ಗುರುತಿಸಲಾಯಿತು. ಆದುದರಿಂದ ಅರ್ಜಿಯನ್ನು ವಜಾಗೊಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಅಪಘಾತವು ಇಲವಾಲದ ಗ್ರಾಮದ ಎಸ್.ಬಿ.ಐ ಬ್ಯಾಂಕ್ ಎದುರು ಆಗಿರುತ್ತದೆ ಎಂದರೆ ಪ್ರ.ವ.ವರದಿಯಲ್ಲಿ ಆ ಬಗ್ಗೆ ಬರೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ದೋಷರೋಪಣಾ ಪಟ್ಟಿಯಲ್ಲಿಯೂ ಸಹ ಎಸ್.ಬಿ.ಐ ಬ್ಯಾಂಕ್ ಎದರು ಆಗಿರುತ್ತದೆ ಎಂದು ಇದೆ ಎಂದರೆ ಸರಿ. ನನಗೆ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ನಡೆದುಕೊಂಡು ಹೋಗುವಾಗ ಅಪಘಾತ ಆಗಿರುತ್ತದೆ ಎಂದರೆ ಪ್ರ.ವ.ವರದಿ ಮತ್ತು ದೋಷರೋಪಣಾ ಪಟ್ಟಿಯಲ್ಲಿ ಮಾತ್ರ ಆ ಬಗ್ಗೆ ಹೇಳಿದ್ದು ಎಂ.ಎಲ್.ಸಿ. ಯಲ್ಲಿ Non RTA ಎಂದು ಬರೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆರೋಪಿಯು ಮೃತರನ್ನು ತಾನೇ ಅಪಘಾತ ಪಡಿಸಿ ಮನೆಗೆ ಕರೆದುಕೊಂಡು ಹೋಗಿ ಕೃತ್ಯವನ್ನು ಮುಚ್ಚಿಟ್ಟು ಮೃತನೇ ಮೂರ್ಚೆ ಹೋಗಿ ಬಿದ್ದಿರುತ್ತಾರೆ ಎಂದು ಸುಳ್ಳು ಹೇಳಿದ್ದು ತನಿಖೆಯ ವೇಳೆ ಸದರಿ ಸುಳ್ಳು ದೃಢಪಟ್ಟ ಕಾರಣ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಮುಂದುವರೆದು ಸಾಕ್ಷಿಯು ಸರಿಯಾಗಿ ತನಿಖೆ ನಡೆಸದೇ ಸದರಿ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

ನಾವು ಮೂರನೇ ವ್ಯಕ್ತಿಯಾದ ಕಾರಣ ಸದರಿ ದೋಷರೋಪಣಾ ಪಟ್ಟಿಯನ್ನು ಪ್ರಶ್ನಿಸಿರುವುದಿಲ್ಲ. ತನಿಖಾಧಿಕಾರಿಯವರು ಸಿ.ಸಿ. ಟಿವಿ ಫುಟೇಜ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಅಪಘಾತದ ಬಗ್ಗೆ ನುಡಿದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ವಾಹನದಿಂದ ಸದರಿ ವ್ಯಕ್ತಿಗೆ ಅಪಘಾತ ಆಗಿರುವ ಬಗ್ಗೆ ಒಪ್ಪಿಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಸಿ.ಸಿ. ಫುಟೇಜ್ ನ್ಯಾಯಾಲಯದಲ್ಲಿ ಪರಿಶೀಲಿಸಲಾಗಿರುವ ಬಗ್ಗೆ ನನಗೆ ಗೊತ್ತಿದೆ. ಸದರಿ ಸಿ.ಸಿ. ಟಿವಿ ಫುಟೇಜ್ ನಲ್ಲಿ ಆಟೋ ಮೃತನಿಗೆ ಡಿಕ್ಕಿ ಪಡಿಸಿರುತ್ತದೆ ಎಂದು ಕಾಣಿಸುತ್ತಿದೆ ಎಂದರೆ ಸಾಕ್ಷಿಯು ವ್ಯಕ್ತಿಯೇ ಬೇರೆ ಆಟೋ ನೇ ಬೇರೆ ಆಟೋ ನಂಬರ್ ಕಾಣುತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

ದೋಷರೋಪಣಾ ಪಟ್ಟಿಯಲ್ಲಿ ಕೆಎ-09-ಡಿ-3618 ರ ಪ್ಯಾಸೆಂಜರ್ ಆಟೋ ಮೇಲೆ ಆರೋಪ ಇದೆ ಎಂದರೆ ಸರಿ. ಮುಂದುವರೆದು ಸರಿಯಾಗಿ ತನಿಖೆ ನಡೆಸದೇ ಆ ರೀತಿ ದೋಷರೋಪಣಾ ಪಟ್ಟಿ ಹಾಕಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಪ್ರಶ್ನಿತ ವಾಹನಕ್ಕೆ ಅಪಘಾತ ಸಮಯದಲ್ಲಿ ವಿಮೆ ಚಾಲ್ತಿಯಲ್ಲಿತ್ತು. ಪ್ರಶ್ನಿತ ವಾಹನ ಚಾಲಕನು ಕ್ರಿಮಿನಲ್ ಪ್ರಕರಣವನ್ನು ಎದುರಿಸುತ್ತಿದ್ದಾನೆ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ. ಎಂ.ಎಲ್.ಸಿ. ಯಲ್ಲಿ ಮೃತನ ಹೆಂಡತಿ ಆರೋಪಿಯ ಹೇಳಿಕೆಯ ಮೇರೆಗೆ ಆ ರೀತಿ ಬರೆಯಿಸಿದುದ ತನಿಖೆ ದೃಢಪಟ್ಟ ನಂತರ ಅಪಘಾತದಿಂದ ಮೃತಪಟ್ಟಿರುತ್ತಾರೆ ಎಂದು ದೋಷರೋಪಣಾ ಪಟ್ಟಿಯಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.